ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.3834/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ರವಿಕುಮಾರ್** | | |
| **ತಂದೆ:ಹೆಸರು** | **ಶಿವಲಿಂಗಪ್ಪ ಕಪ್ಪತ್ತನವರ್** | **ಪಿಡಬ್ಲೂ:** | **08** |
| **ವಯಸ್ಸು** | **43 ವರ್ಷ** | **ಸಿಡಬ್ಲೂ:** | **28** |
| **ಉದ್ಯೋಗ:** | **ಸಿಪಿಐ** | | |
| **ವಾಸ ಸ್ಥಳ:** | **ನವಲಗುಂದ ವೃತ್ತ,** | | |

**ದಿನಾಂಕ 09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

**ಈ ದಿನ ಸಾಕ್ಷಿದಾರರು ವಿದ್ಯುನ್ಮಾನ ಯಂತ್ರ, ಗೂಗಲ್ ಮೀಟ್ ID No. frd-hnzi-kcu ಮುಖಾಂತರ ಹಾಜರಾಗಿದ್ದು, ಈ ಕೆಳಕಂಡಂತೆ ಸಾಕ್ಷಿ ವಿಚಾರಣೆ ಮಾಡಲಾಯಿತು.**

ನಾನು ದಿ.12-08-2022 ರಿಂದ ದಿ.18-09-2023 ರವರೆಗೆ ಸಿಂಧನೂರು ವೃತ್ತದಲ್ಲಿ ಸಿಪಿಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ:12.08.2022 ರಂದು ಮುಂದಿನ ತನಿಖೆಗಾಗಿ ಚಾಸಾ-24 ರವರಿಂದ ಪಡೆದಿರುತ್ತೇನೆ. ದಿ.25-08-2022 ರಂದು ಗಾಯಾಳು ಚಾಸಾ-8 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ 1 ನೇ ಆರೋಪಿ ಠಾಣೆಗೆ ಹಾಜರಾಗಿ, ನ್ಯಾಯಾಲಯದಿಂದ ಪಡೆದ ಜಾಮೀನಿನ ಪ್ರತಿಯನ್ನು ತಂದು ನನ್ನ

ಮುಂದೆ ಹಾಜರುಪಡಿಸಿದ್ದು, ಆತನ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ನಂತರ ಲಾರಿ ಸಂ.ಕೆ ಎ 14/ಬಿ-3809 ನ್ನು ಅದರ ಮಾಲೀಕರರಿಂದ ಮುಚ್ಚಳಿಕೆ ಪತ್ರ ಬರೆಸಿಕೊಂಡು, ಅವರ ತಾಬಾಕ್ಕೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ಬಾಂಡನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-38 ಎಂದು, ಸಾಕ್ಷಿಯ ಸಹಿಯನ್ನು ನಿಪಿ-38 ಎ ಎಂದು ಗುರುತಿಸಲಾಯಿತು.

ದಿ.01-09-2022 ರಂದು ರೇವಣ ಸಿದ್ದಪ್ಪರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿ.05-09-2022 ರಂದು ರಂಗಪ್ಪ, ದಿ.06-09-2022 ರಂದು ನೂರುಲ್ಲಾ ರವರ, ದಿ.10-09-2022 ರಂದು ಇಮ್ರಾನ್ ಸಾಹೇಬ್ ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ಗಾ.ಪ್ರ.ಪತ್ರಗಳನ್ನು ನೋಡಿ ಗುರುತಿಸಿದ್ದು, ಗಾ.ಪ್ರ.ಪತ್ರಗಳನ್ನು ನಿಪಿ-39 ರಿಂದ 42 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-39 ಎ ಯಿಂದ 42 ಎ ಎಂದು ಗುರುತಿಸಲಾಯಿತು. ದಿ.06-10-2022 ರಂದು ವಾಹನ ತಪಾಸಣಾ ವರದಿ ಪಡೆದಿರುತ್ತೇನೆ. ಸದರಿ ವಾ.ತ.ವರದಿಯನ್ನು ನಿಪಿ-43 ಎಂದು, ಸಾಕ್ಷಿಯ ಸಹಿಯನ್ನು ನಿಪಿ-43 ಎ ಎಂದು ಗುರುತಿಸಲಾಯಿತು. ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿದ್ದರಿಂದ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು 2 ಇಂಡಿಮಿನಿಟಿ ಬಾಂಡ್‌ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-44 & 45 ಎಂದು ಗುರುತಿಸಲಾಯಿತು. ವಾಹನದ ಎಲ್ಲಾ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಕಲಂ. 65 ಬಿ ಪ್ರ.ಪತ್ರವನ್ನು ನಿಪಿ-46 ಎಂದು, ವಾಹನದ ಎಲ್ಲಾ ದಾಖಲೆಗಳನ್ನು ಒಟ್ಟಾಗಿ ನಿಪಿ-47 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ-</u>**

1. ಗಾಯಗಳು ಯಾವುದರಿಂದ ಆಗಿದೆ ಎಂದು ಗಾ.ಪ್ರ.ಪತ್ರಗಳಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಗಾ.ಪ್ರ.ಪತ್ರಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಖುದ್ದಾಗಿ ಠಾಣೆಗೆ ಹಾಜರಾಗಿಲ್ಲ, ನೀವು ದಸ್ತಗಿರಿ ಕ್ರಮ ಅನುಸರಿಸಿಲ್ಲ ಎಂದರೆ ಸರಿಯಲ್ಲ. ಇಂಡಿಮಿನಿಟಿ ಬಾಂಡ್ ಪಡೆದು ವಾಹನವನ್ನು ಬಿಡುಗಡೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.